# ಕರ್ನಾಟಕದ ಶ್ರೀಹರಿಗೆ ಸೆಮಿಫೈನಲ್ ಗುರಿ



ಒಲಿಂಪಿಕ್ಸ್ ಆರಂಭವಾಗಲು 22 ದಿನಗಳಷ್ಟೇ ಬಾಕಿಯಿದ್ದಾಗ ಬೆಂಗಳೂರಿನ ಈಜುಪಟು ಶ್ರೀಹರಿ ನಟರಾಜ್ ಅರ್ಹತೆ ಪಡೆದುಕೊಂಡಿದ್ದಾರೆ. ಈಜು ಸ್ಪರ್ಧೆಗಳಲ್ಲಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದ ಹಲವು ಕ್ರೀಡಾಕೂಟಗಳಲ್ಲಿ ಭಾರತೀಯ ಸ್ಪರ್ಧಿಗಳು ಪ್ರಾಬಲ್ಯ ಮೆರೆದಿದ್ದಾರೆ. ಆದರೆ, ಒಲಿಂಪಿಕ್ಸ್‌ನಂಥ ಭವ್ಯ ವೇದಿಕೆಯಲ್ಲಿ ಪದಕ ಧರಿಸಲು ಒಮ್ಮೆಯೂ ಸಾಧ್ಯವಾಗಿಲ್ಲ.

ಈಜು ಸ್ಪರ್ಧೆಯಲ್ಲಿ ಭಾಗವಹಿಸಲು ಅರ್ಹತೆ ಪಡೆಯುವುದು ಕೂಡ ದೊಡ್ಡ ಸಾಧನೆ ಎನಿಸಿದೆ. 20 ವರ್ಷದ ಶ್ರೀಹರಿ ರೋಮ್‌ನಲ್ಲಿ ನಡೆದ ಅರ್ಹತಾ ಸುತ್ತಿನ 100 ಮೀಟರ್ಸ್ ಬ್ಯಾಕ್‌ಸ್ಟ್ರೋಕ್‌ನಲ್ಲಿ ‘ಎ’ ದರ್ಜೆಯ ಅರ್ಹತಾ ಸಮಯದಲ್ಲಿ (53.77 ಸೆಕೆಂಡ್) ಗುರಿ ಮುಟ್ಟಿದ್ದರು. ಎರಡು ವರ್ಷದವರಿದ್ದಾಗ ಈಜು ಕಲಿಕೆ ಆರಂಭಿಸಿದ ಅವರು, 2018ರ ಕಾಮನ್‌ವೆಲ್ತ್ ಮತ್ತು ಏಷ್ಯನ್ ಕ್ರೀಡಾಕೂಟಗಳಲ್ಲಿ ಪಾಲ್ಗೊಂಡಿದ್ದರು. ಅದೇ ವರ್ಷ ಯೂತ್ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಿದ್ದರು. ಬೆಂಗಳೂರಿನ ಜೈನ್ ಕಾಲೇಜಿನಲ್ಲಿ ಬಿ.ಎ. ದ್ವಿತೀಯ ವರ್ಷ ಓದುತ್ತಿರುವ ಶ್ರೀಹರಿ ಬೆಂಗಳೂರಿನ ಕಲ್ಯಾಣಿ ಮತ್ತು ನಟರಾಜ್ ದಂಪತಿಯ ಪುತ್ರ. ಅವರನ್ನು ‘ಸುಧಾ’ ಮಾತಿಗೆಳೆಯಿತು.

● ಮೊದಲ ಸಲ ಒಲಿಂಪಿಕ್ಸ್ ಟಿಕೆಟ್ ಲಭಿಸಿದೆ. ಪ್ರತಿಕ್ರಿಯೆ ಏನು?

ಒಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳುವುದು ಪ್ರತಿ ಕ್ರೀಡಾಪಟುವಿನ ಕನಸು. ಇದರಿಂದ ನಾನೂ ಹೊರತಲ್ಲ. ಈ ಬಾರಿ ಅರ್ಹತೆ ಪಡೆದುಕೊಳ್ಳಲೇಬೇಕು ಎನ್ನುವ ಗುರಿಯೊಂದಿಗೆ ಅಭ್ಯಾಸ ನಡೆಸಿದ್ದೆ. ಎರಡು ವರ್ಷಗಳಿಂದ ಬಹಳಷ್ಟು ಸಮಯವನ್ನು ಈಜುಕೊಳದಲ್ಲಿಯೇ ಕಳೆದಿದ್ದೇನೆ. ಅಷ್ಟೇ ಸಮಯವನ್ನು ಫಿಟ್‌ನೆಸ್ ಗಳಿಸಿಕೊಳ್ಳುವುದಕ್ಕೂ ನೀಡಿದ್ದೇನೆ. ಹಿಂದಿನ 15 ತಿಂಗಳ ಅವಧಿಯಲ್ಲಿ ಬಿಡುವಿಗೆ ಸಮಯವನ್ನೇ ನೀಡಿಲ್ಲ. ಆ ಶ್ರಮದಿಂದಲೇ ‘ಎ’ ದರ್ಜೆಯ ಅರ್ಹತೆ ಗಳಿಸಲು ಸಾಧ್ಯವಾಯಿತು.

● ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯುವ ಹಾದಿ ಹೇಗಿತ್ತು?

ಪದಕಗಳನ್ನು ಜಯಿಸಿರುವ ಹರಿಯಾಣದ ಬಜರಂಗ್ ಪೂನಿಯಾ ಅವರಿಗೀಗ 27 ವರ್ಷ. ಹಿಂದಿನ ಮೂರು ವರ್ಷಗಳ ಅವಧಿಯಲ್ಲಿ ಅವರು ಅಂತರರಾಷ್ಟ್ರೀಯ ಮಟ್ಟದಲ್ಲಿ ಎಂಟು ಪದಕಗಳನ್ನು ಗೆದ್ದಿರುವುದು ಒಲಿಂಪಿಕ್ಸ್‌ನಲ್ಲಿಯೂ ಪದಕ ಗೆಲ್ಲಬಹುದು ಎನ್ನುವ ಭರವಸೆ ಮೂಡಿಸಿದೆ.

ಮೊದಲ ಬಾರಿಗೆ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದಿರುವ ಬಜರಂಗ್ 2019ರಿಂದ ಇದುವರೆಗೆ ಒಂಬತ್ತು ಅಂತರರಾಷ್ಟ್ರೀಯ ಸ್ಪರ್ಧೆಗಳಲ್ಲಿ ಪಾಲ್ಗೊಂಡಿದ್ದಾರೆ. 65 ಕೆ.ಜಿ. ವಿಭಾಗದಲ್ಲಿ ಸ್ಪರ್ಧಿಸುವ ಬಜರಂಗ್ ದೊಡ್ಡ ಕ್ರೀಡಾ ವೇದಿಕೆಯಲ್ಲಿ ಒತ್ತಡ ನಿಭಾಯಿಸುವ ಕೌಶಲ ಹೊಂದಿದ್ದಾರೆ.

## ಅನುಭವಿ ವಿನೇಶ್ ಫೋಗಟ್

ಕುಸ್ತಿ ಕುಟುಂಬದ ಹಿನ್ನೆಲೆಯಿಂದ (ಗೀತಾ ಫೋಗಟ್ ಹಾಗೂ ಬಬಿತಾ ಕುಮಾರಿ ಸಂಬಂಧಿಕರು) ಬಂದಿರುವ ವಿನೇಶ್ ಫೋಗಟ್ ಟೋಕಿಯೊದಲ್ಲಿ ಪದಕ ಗೆಲ್ಲುವ ನೆಚ್ಚಿನ ಸ್ಪರ್ಧಿ ಎನಿಸಿದ್ದಾರೆ. ಹಿಂದಿನ ಒಲಿಂಪಿಕ್ಸ್‌ನಲ್ಲಿ ಆಡಿದ ಅನುಭವ ಹೊಂದಿರುವ ಅವರು, ಕಾಮನ್‌ವೆಲ್ತ್ ಮತ್ತು ಏಷ್ಯನ್ ಕ್ರೀಡಾಕೂಟ ಎರಡರಲ್ಲಿಯೂ ಚಿನ್ನದ ಪದಕ ಗೆದ್ದ ಭಾರತದ ಮೊದಲ ಮಹಿಳಾ ಕುಸ್ತಿಪಟು ಎನ್ನುವ ಹೆಗ್ಗಳಿಕೆ ಹೊಂದಿದ್ದಾರೆ.

ಒಲಿಂಪಿಕ್ಸ್‌ನಲ್ಲಿ 53 ಕೆ.ಜಿ. ವಿಭಾಗದಲ್ಲಿ ಸ್ಪರ್ಧಿಸಲಿರುವ ವಿನೇಶ್ 2019ರ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಜಯಿಸಿದ್ದರು. ರಿಯೊ ಡಿ ಜನೈರೊ ಒಲಿಂಪಿಕ್ಸ್ ಬಳಿಕ ಗಂಭೀರ ಸ್ವರೂಪದ ಗಾಯಕ್ಕೆ ತುತ್ತಾಗಿದ್ದ ಈ ಕುಸ್ತಿ ಪಟು ಚೇತರಿಸಿಕೊಂಡು ನಿರಂತರವಾಗಿ ಟೂರ್ನಿಗಳಲ್ಲಿ ಪಾಲ್ಗೊಳ್ಳುತ್ತಿದ್ದಾರೆ.

ಇವರನ್ನು ಹೊರತುಪಡಿಸಿ ಭಾರತ ಪುರುಷರ ಹಾಕಿ ತಂಡ ಪದಕ ಗೆಲ್ಲಬೇಕು ಎಂದು ಕೋಟ್ಯಂತರ ಕ್ರೀಡಾಪ್ರೇಮಿಗಳು ನಿರೀಕ್ಷೆಗಳ ಮೂಟೆಹೊತ್ತು ಕಾಯುತ್ತಿದ್ದಾರೆ. 1980ರ ಮಾಸ್ಕೊ ಒಲಿಂಪಿಕ್ಸ್ ಬಳಿಕ ಭಾರತ ಹಾಕಿ ತಂಡ ಪದಕದ ಸಮೀಪವೂ ಹೋಗಿಲ್ಲ. 1984ರಲ್ಲಿ ಲಾಸ್ ಏಂಜಲೀಸ್‌ನಲ್ಲಿ ಐದನೇ ಸ್ಥಾನ ಪಡೆದಿದ್ದು ಇದುವರೆಗಿನ



ಬೆಂಗಳೂರಿನ ಅಶ್ವಾರೋಹಿ ಫವಾದ್ ಮಿರ್ಜಾ